ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2186
ಸದಸ್ಯರ ಹೆಸರು : ಶ್ರೀ ಸಲೀಂ ಅಹಮದ್
ಉತ್ತರಿಸುವ ದಿನಾಂಕ : 18-03-2022
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಧಾರವಾಡ, ಹಾವೇರಿ, ಗದಗ ಜಿಲ್ಲೆಗಳಲ್ಲಿ ಇರುವ ವಿವಿಧ ವಸತಿ ಶಾಲೆಗಳೆಷ್ಟು; ಎಲ್ಲಾ ವಸತಿ ಶಾಲೆಗಳಿಗೆ ನಿವೇಶನ ಲಭ್ಯವಿದೆಯೇ ಹಾಗೂ ಸ್ವಂತ ಕಟ್ಟಡ ನಿರ್ಮಿಸಲಾಗಿದೆಯೇ;	ಕರ್ನಾಟಕ ವಸತಿ ಸಂಸ್ಥೆಗಳ ಸಂಘದ ಅಡಿಯಲ್ಲಿ ಧಾರವಾಡ, ಹಾವೇರಿ, ಗದಗ ಜಿಲ್ಲೆಗಳಲ್ಲಿ ಒಟ್ಟು 59 ವಸತಿ ಶಾಲೆಗಳು ಮಂಜೂರಾಗಿ ಕಾರ್ಯನಿರ್ವಹಿಸುತ್ತಿವೆ. ವಸತಿ ಶಾಲೆಗಳ ವಿವರಗಳು ಕೆಳಗಿನಂತಿವೆ. (ಕೆಳಗಿನ ಕೋಷ್ಟಕ ನೋಡಿ)
ಆ)	ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಇ)	ಬಂದಿದ್ದಲ್ಲಿ, ಯಾವ ಯಾವ ಮೂಲಭೂತ ಸೌಕರ್ಯಗಳ ಕೊರತೆ ಇದೆ; ಇವರುಗಳನ್ನು ಪರಿಹರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;	ಕರ್ನಾಟಕ ವಸತಿ ಸಂಸ್ಥೆಗಳ ಸಂಘದ ಅಧೀನದಲ್ಲಿ 826 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಒಂದು ಮಾದರಿ ವಸತಿ ಶಾಲೆಗೆ 43 ವಿವಿಧ ಬಗೆಯ ಸಾಮಗ್ರಿಗಳನ್ನು ಒದಗಿಸಬೇಕಾಗಿರುತ್ತದೆ. ವಿವರಗಳನ್ನು ಅನುಬಂಧ-01 ರಲ್ಲಿ ನೀಡಿದೆ.

ವಿವರ	ಹಾವೇರಿ	ಗದಗ	ಧಾರವಾಡ	ಒಟ್ಟು
ಸ್ವಂತ ಕಟ್ಟಡ	20	11	9	40
ನಿರ್ಮಾಣ ಹಂತದಲ್ಲಿರುವ ವಸತಿ ಶಾಲೆಗಳು	6	3	1	10
ನಿವೇಶನ ಲಭ್ಯವಿರುವ ವಸತಿ ಶಾಲೆಗಳು	2	0	2	4
ಲೋಕೋಪಯೋಗಿ ಇಲಾಖೆಗೆ ವಹಿಸಿದ ವಸತಿ ಶಾಲೆಗಳು	0	1	0	1
ನಿವೇಶನ ಲಭ್ಯವಿಲ್ಲದ ವಸತಿ ಶಾಲೆಗಳು	0	1	3	4
ಒಟ್ಟು	28	16	15	59

		ಪ್ರತಿ ಬಾರಿ ಬಜೆಟ್‌ನಲ್ಲಿ ಶ್ರೇಣಿವಾರು ಕಾರ್ಯಕ್ರಮಗಳಿಗೆ ಮಾತ್ರ ಅನುದಾನ ಒದಗಿಸಲಾಗುತ್ತಿದ್ದು, ಪ್ರತ್ಯೇಕವಾಗಿ ಮೂಲಭೂತ ಸಾಮಗ್ರಿಗಳನ್ನು ಒದಗಿಸಲು ಯಾವುದೇ ಅನುದಾನ ಬಿಡುಗಡೆಯಾಗುತ್ತಿಲ್ಲ. ಶ್ರೇಣಿವಾರು ಕಾರ್ಯಕ್ರಮಗಳಿಗೆ ಬಿಡುಗಡೆಯಾದ ಅನುದಾನದಲ್ಲಿ ಉಳಿಕೆಯಾದ ಅನುದಾನವನ್ನು ಬಳಸಿಕೊಂಡು ವಸತಿ ಶಾಲೆ/ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿರುತ್ತದೆ. ಪ್ರಸ್ತುತ ಪ್ರಾಂಶುಪಾಲರುಗಳು ಸಲ್ಲಿಸಿರುವ ಬೇಡಿಕೆಯಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಅಂದಾಜು ರೂ.593.54 ಕೋಟಿಗಳ ಹೆಚ್ಚುವರಿ ಅನುದಾನ ಅವಶ್ಯಕತೆಯಿದ್ದು, ಈ ಅನುದಾನ ಬಿಡುಗಡೆ ಮಾಡುವಂತೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿ, ಕೋವಿಡ್-19 ಹಿನ್ನಲೆಯಲ್ಲಿ ರಾಜ್ಯ ಆರ್ಥಿಕ ಸಂಕಷ್ಟದಲ್ಲಿರುವುದರಿಂದ ಹೆಚ್ಚುವರಿ ಅನುದಾನ ಒದಗಿಸಲು ಸಾಧ್ಯವಿರುವುದಿಲ್ಲ ಎಂದು ಹಿಂಬರಹ ನೀಡಿರುತ್ತದೆ. ಆದಾಗ್ಯೂ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತ ದೃಷ್ಟಿಯಿಂದ ಅನುದಾನದ ಲಭ್ಯತೆ ಆಧಾರದಮೇಲೆ ಹಂತ ಹಂತವಾಗಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಲಾಗುವುದು.
ಈ)	ವಸತಿ ಶಾಲೆಗಳ ನಿರ್ವಹಣೆಗೆ ಆಹಾರ ಸಾಮಾಗ್ರಿಗಳ ಸರಬರಾಜಿಗಾಗಿ ಎಷ್ಟು ವರ್ಷಗಳಿಗೆ ಒಮ್ಮೆ ಟೆಂಡರ್ ಆಹ್ವಾನಿಸಲಾಗುವುದು; ಹಾಲಿ ಯಾವಾಗ ಟೆಂಡರ್ ಆಹ್ವಾನಿಸಲಾಗಿದೆ;	ವಸತಿ ಶಾಲೆಗಳ ನಿರ್ವಹಣೆಗೆ ಆಹಾರ ಸಾಮಗ್ರಿಗಳ ಸರಬರಾಜಿಗಾಗಿ ಪ್ರತಿ ವರ್ಷಕ್ಕೊಮ್ಮೆ ಟೆಂಡರ್ ಆಹ್ವಾನಿಸಲಾಗುತ್ತಿದೆ. ಕೋವಿಡ್-19 ಹಿನ್ನಲೆಯಲ್ಲಿ ವಸತಿ ಶಾಲೆ/ ಕಾಲೇಜುಗಳು ಪ್ರಾರಂಭಿಕ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭವಾಗದ ಹಿನ್ನಲೆಯಲ್ಲಿ 2021-22ನೇ ಸಾಲಿಗೆ ವಸತಿ ಶಾಲೆಗಳ ನಿರ್ವಹಣೆಗೆ ಆಹಾರ ಸಾಮಗ್ರಿಗಳ ಸರಬರಾಜು ಮಾಡಲು ದಿನಾಂಕ:12.01.2022 ರಂದು ಜಿಲ್ಲಾವಾರು ಅಲ್ಪಾವಧಿ ಟೆಂಡರ್‌ಗಳನ್ನು ಇ-ಪ್ರೊಕ್ಯುರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿರುತ್ತದೆ. ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

ಉ)	ಪ್ರತಿ ವರ್ಷ ಟೆಂಡರ್ ಆಹ್ವಾನಿಸಿ ಆಹಾರ ಪದಾರ್ಥಗಳನ್ನು ಖರೀದಿಸುವುದರಿಂದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ಸೌಲಭ್ಯ ಕಲ್ಪಿಸಲು ಅನುಕೂಲವಾಗು- ವುದಲ್ಲವೇ; ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?	ವಸತಿ ಶಾಲೆಗಳ ನಿರ್ವಹಣೆಗಾಗಿ ಆಹಾರ ಸಾಮಗ್ರಿಗಳ ಸರಬರಾಜಿಗಾಗಿ ಪ್ರತಿ ವರ್ಷ ಟೆಂಡರ್‌ಗಳನ್ನು ಆಹ್ವಾನಿಸಲಾಗುತ್ತಿದೆ.

ಸಕಇ 174 ಮೊದೇಶಾ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಅನುಬಂಧ-01 (ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2186 ಕ್ಕೆ			
ಸಾಮಗ್ರಿಗಳ ವಿವರ			
1	ವಾಟರ್ ಪ್ಯೂರಿಫೈಯರ್	23	ಸಿ.ಸಿ.ಟಿ.ವಿ. (1 ಸೆಟ್ 8 ಕ್ಯಾಮರಗಳು)
2	ಟಿ.ವಿ.	24	ರಾತ್ರಿ ಉಡುಪು ಮತ್ತು ಸ್ವೆಟರ್
3	ಸೊಳ್ಳೆ ಪರದೆ	25	ಟು ಟಯರ್ ಕಾಟ್
4	ಶಾಲಾ ಬ್ಯಾಗ್‌ಗಳು	26	ಕಂಪ್ಯೂಟರ್ ಟೇಬಲ್
5	ನರ್ಸಿಂಗ್ ಕಿಟ್(ಸೆಟ್‌ಗಳಲ್ಲಿ)	27	ಕಂಪ್ಯೂಟರ್ ಛೇರ್
6	ಪಾತ್ರೆ ಪರಿಕರಗಳು (ಸೆಟ್‌ಗಳಲ್ಲಿ)	28	ಗ್ಲಾಸ್ ಡೋರ್ ಅಲ್ಮೇರಾ
7	ಜನರೇಟರ್‌ಗಳು	29	ಹಾಸಿಗೆಗಳು
8	ಕಂಪ್ಯೂಟರ್	30	ದಿಂಬುಗಳು
9	ಗ್ರೈಂಡರ್	31	ಸೋಲಾರ್ ವಾಟರ್ ಹೀಟರ್ (500 ಲೀ ಕ್ಯಾಪಾಸಿಟಿ)
10	ತಟ್ಟೆ-ಲೋಟಗಳು	32	ಗಾರ್ಡನ್ ಎಕ್ಯೂಪ್‌ಮೆಂಟ್
11	ಪ್ರಯೋಗಾಲಯ ಸಾಮಗ್ರಿಗಳು (ಸೆಟ್‌ಗಳಲ್ಲಿ)	33	ಫ್ಲೋರ್ ಕ್ಲೀನಿಂಗ್ ಮಿಷನ್
12	ಪಾಠೋಪಕರಣಗಳು (ಸೆಟ್‌ಗಳಲ್ಲಿ)	34	ಫ್ರೀಜರ್
13	ಪ್ರೊಜೆಕ್ಟರ್ ಮತ್ತು ಸ್ಕ್ರೀನ್	35	ಡಯಾಸ್/ ಪೋಡಿಯಂ
14	ಇನ್ಸಿನರೇಟರ್ *	36	ಗ್ರೀನ್ & ವೈಟ್ ಬೋರ್ಡ್
15	ಕ್ರೀಡಾ ಸಾಮಗ್ರಿಗಳು (ಸೆಟ್‌ಗಳಲ್ಲಿ)	37	ಬಕೇಟ್ ಮತ್ತು ಜಗ್ಗು
16	ಸಂಗೀತ ಉಪಕರಣಗಳು (ಸೆಟ್‌ಗಳಲ್ಲಿ)	38	ಡಸ್ಟ್‌ಬಿನ್
17	ಡೆಸ್ಕ್ ಕಮ್ ಬೆಂಚ್ (4 ಸೀಟರ್)	39	ಶೂ ರ್‍ಯಾಕ್ಸ್
18	ಟ್ರಂಕ್	40	ಡೋರ್ ಮ್ಯಾಟ್ಸ್
19	ಡೈನಿಂ ಗ್ ಟೇಬಲ್	41	ಜಮಖಾನ(ದೊಡ್ಡದು)
20	ಎಸ್-ಟೈಪ್ ಛೇರ್	42	ಸೋಲಾರ್ ಲೈಟಿಂಗ್ಸ್
21	ಆಫೀಸ್ ಟೇಬಲ್	43	ಬೆಡ್‌ಶೀಟ್ ಮತ್ತು ಬೆಡ್‌ಸ್ಪ್ರೆಡ್
22	ಅಲ್ಮೇರಾ ರ್‍ಯಾಕ್ಸ್		

ಅನುಬಂಧ–01 (ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1877 (2186)ಕ್ಕೆ			
ಸಾಮಗ್ರಿಗಳ ವಿವರ			
1	ವಾಟರ್ ಪ್ಯೂರಿಫೈಯರ್	23	ಸಿ.ಸಿ.ಟಿ.ವಿ. (1 ಸೆಟ್ 8 ಕ್ಯಾಮರಗಳು)
2	ಟಿ.ವಿ.	24	ರಾತ್ರಿ ಉಡುಪು ಮತ್ತು ಸ್ವೆಟರ್
3	ಸೊಳ್ಳೆ ಪರದೆ	25	ಟು ಟಯರ್ ಕಾಟ್
4	ಶಾಲಾ ಬ್ಯಾಗ್‌ಗಳು	26	ಕಂಪ್ಯೂಟರ್ ಟೇಬಲ್
5	ನರ್ಸಿಂಗ್ ಕಿಟ್(ಸೆಟ್‌ಗಳಲ್ಲಿ)	27	ಕಂಪ್ಯೂಟರ್ ಛೇರ್
6	ಪಾತ್ರೆ ಪರಿಕರಗಳು (ಸೆಟ್‌ಗಳಲ್ಲಿ)	28	ಗ್ಲಾಸ್ ಡೋರ್ ಅಲ್ಮೇರಾ
7	ಜನರೇಟರ್‌ಗಳು	29	ಹಾಸಿಗೆಗಳು
8	ಕಂಪ್ಯೂಟರ್	30	ದಿಂಬುಗಳು
9	ಗ್ರೈಂಡರ್	31	ಸೋಲಾರ್ ವಾಟರ್ ಹೀಟರ್ (500 ಲೀ ಕ್ಯಾಪಾಸಿಟಿ)
10	ತಟ್ಟೆ–ಲೋಟಗಳು	32	ಗಾರ್ಡನ್ ಎಕ್ವ್ಯೂಪ್‌ಮೆಂಟ್
11	ಪ್ರಯೋಗಾಲಯ ಸಾಮಗ್ರಿಗಳು (ಸೆಟ್‌ಗಳಲ್ಲಿ)	33	ಫ್ಲೋರ್ ಕ್ಲೀನಿಂಗ್ ಮಿಷನ್
12	ಪಾಠೋಪಕರಣಗಳು (ಸೆಟ್‌ಗಳಲ್ಲಿ)	34	ಫ್ರೀಜರ್
13	ಪ್ರೊಜೆಕ್ಟರ್ ಮತ್ತು ಸ್ಕ್ರೀನ್	35	ಡಯಾಸ್/ ಪೋಡಿಯಂ
14	ಇನ್ಸಿನರೇಟರ್ *	36	ಗ್ರೀನ್ & ವೈಟ್ ಬೋರ್ಡ್
15	ಕ್ರೀಡಾ ಸಾಮಗ್ರಿಗಳು (ಸೆಟ್‌ಗಳಲ್ಲಿ)	37	ಬಕೇಟ್ ಮತ್ತು ಜಗ್ಗು
16	ಸಂಗೀತ ಉಪಕರಣಗಳು (ಸೆಟ್‌ಗಳಲ್ಲಿ)	38	ಡಸ್ಟ್‌ಬಿನ್
17	ಡೆಸ್ಕ್ ಕಮ್ ಬೆಂಚ್ (4 ಸೀಟರ್)	39	ಶೂ ರ್‍ಯಾಕ್ಸ್
18	ಟ್ರಂಕ್	40	ಡೋರ್ ಮ್ಯಾಟ್ಸ್
19	ಡೈನಿಂಗ್ ಟೇಬಲ್	41	ಜಮಖಾನ(ದೊಡ್ಡದು)
20	ಎಸ್–ಟೈಪ್ ಛೇರ್	42	ಸೋಲಾರ್ ಲೈಟಿಂಗ್ಸ್
21	ಆಫೀಸ್ ಟೇಬಲ್	43	ಬೆಡ್‌ಶೀಟ್ ಮತ್ತು ಬೆಡ್‌ಸ್ಪ್ರೆಡ್
22	ಅಲ್ಮೇರಾ ರ್‍ಯಾಕ್ಸ್		